




ಡಾ. ಎಸ್. ರಾಮಮೂರ್ತಿ

# 12-7-2012ರಿಂದ 18-7-2012ರವರೆಗೆ




ಕೆಲಸ ಕಾರ್ಯಗಳಲ್ಲಿ ಶ್ರಮ ಕಡಿಮೆಯಾಗಿ ಸಫಲವಾಗುವುವು. ಉದ್ಯಮದಲ್ಲಿ ನಿರೀಕ್ಷಿಸಿದ ಲಾಭ ಲಭಿಸುವುದು. ಆಟ ಪಾಠಗಳಲ್ಲಿ ಮುನ್ನಡೆ. ಸಂದೇಶಗಳು ಸಕಾಲಕ್ಕೆ ಆಗಮಿಸಿ ಸಂತೋಷವಾಗುವುದು. ತಕರಾರುಗಳಲ್ಲಿ ರಾಜಿ ಸಂಭವ. ಬಂಧು ಮಿತ್ರರಿಂದ ಪ್ರಶಂಸೆ ದೊರೆಯುವುದು. ಒತ್ತಡವಿಲ್ಲದ ಪ್ರಯಾಣ. ಶುಭದಿನ: 16; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಒತ್ತಡ. ಮಕ್ಕಳು ವಿರೋಧವಾಗಿ ನಡೆದುಕೊಳ್ಳುವರು. ನಿರೀಕ್ಷೆಯಂತೆ ಕೆಲಸ ಕಾರ್ಯಗಳು ನಡೆಯುವುದಿಲ್ಲ. ವ್ಯಾಪಾರದಲ್ಲಿ ನಷ್ಟ. ಪೆಟ್ಟಾಗುವ ಸಾಧ್ಯತೆ. ವಾರದ ಮಧ್ಯಭಾಗದಿಂದ ಮನಶಾಂತಿ. ಉತ್ಸಾಹದಿಂದ ಉದ್ಯೋಗ, ವೃತ್ತಿಗಳಲ್ಲಿ ತೊಡಗುವಿಕೆ. ಲೇವಾದೇವಿಗಳಲ್ಲಿ ಲಾಭ. ಆಪ್ತರಿಂದ ಸಹಾಯ. ಶುಭದಿನ: 16; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಸಂತೋಷ. ಹಿತೈಷಿಗಳ ಆಗಮನ. ತಕರಾರುಗಳಲ್ಲಿ ಜಯ. ಉದ್ಯೋಗದಲ್ಲಿ ಸಮಾಧಾನ. ಅಧ್ಯಯನದಲ್ಲಿ ಮುನ್ನಡೆ. ಶುಭ ಸುದ್ದಿ. ವಾರದ ಮಧ್ಯಭಾಗದಲ್ಲಿ ಅನಾರೋಗ್ಯ. ಮೋಸವಾಗುವ ಸಾಧ್ಯತೆ. ವಾಹನಗಳಿಂದ ತೊಂದರೆ. ಕೆಲಸ ಕಾರ್ಯಗಳಲ್ಲಿ ಹಿನ್ನಡೆ. ನಷ್ಟ, ವಾರಾಂತ್ಯದಲ್ಲಿ ಸ್ಥಿತಿ ಸುಧಾರಣೆ. ಶುಭದಿನ: 13; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ




ವಾರದ ಮಧ್ಯಭಾಗದವರೆಗೂ ಸೌಖ್ಯ. ಪ್ರೀತಿ ಪಾತ್ರರ ಆಗಮನ. ಗಣ್ಯರಿಂದ ಸಹಾಯ. ಉದ್ಯೋಗದಲ್ಲಿ ಮನಶಾಂತಿ. ಸ್ಪರ್ಧೆಗಳಲ್ಲಿ ಗೆಲುವು. ಅಧ್ಯಯನದಲ್ಲಿ ಮುನ್ನಡೆ. ವ್ಯಾಪಾರದಲ್ಲಿ ತಕ್ಕ ಲಾಭ. ಸಂದೇಶಗಳಿಂದ ಸಮಾಧಾನ. ವಾರಾಂತ್ಯದಲ್ಲಿ ಭಯ. ಚಂಚಲ ಮನಸ್ಸು. ಕೆಲಸ ಕಾರ್ಯ ವೈಫಲ್ಯ. ಆರೋಗ್ಯ ವ್ಯತ್ಯಯ. ಶುಭದಿನ: 14; ಗಣಪತಿ, ಪಾರ್ವತಿ ಅಷ್ಟೋತ್ತರ ಪಠಿಸಿ




ವಾರದ ಆರಂಭ ಕಾರ್ಯಗಳಲ್ಲಿ ಪೂರ್ಣ ಸಮಾಧಾನವಿಲ್ಲ. ವ್ಯಾಪಾರದಲ್ಲಿ ಲಾಭದ ಕೊರತೆ. ಪ್ರಯಾಣದಲ್ಲಿ ಒತ್ತಡ. ಅಕಾಲ ಭೋಜನ. ಇಲ್ಲ ಸಲ್ಲದ ಚಿಂತೆ. ವಾರದ ಮಧ್ಯಭಾಗದಿಂದ ಶಾಂತಿ, ಸಮಾಧಾನ. ಮನೋಬಲ ಹೆಚ್ಚುವುದು. ಉದ್ಯೋಗದಲ್ಲಿ ಪ್ರಗತಿ. ಆಟಪಾಠಗಳಲ್ಲಿ ಸಫಲತೆ. ಕ್ರಯ ವಿಕ್ರಯಗಳಲ್ಲಿ ಲಾಭ, ಸುಸಂದೇಶ. ಶುಭದಿನ: 16; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ನಷ್ಟ. ನಿರೀಕ್ಷೆಗೆ ವಿರುದ್ಧ ಫಲ. ಕುಟುಂಬದಲ್ಲಿ ಕಲಹ. ಆರೋಗ್ಯ ವ್ಯತ್ಯಯ. ಅಹಿತಕರ ಘಟನೆಗಳು. ವಾರದ ಮಧ್ಯಭಾಗದಿಂದ ಸಮಾಧಾನ. ಹಿರಿಯರಿಂದ ಸಹಾಯ. ಶ್ರಮವಾದರೂ ಕಾರ್ಯ ಸಾಧನೆ. ವ್ಯಾಪಾರದಲ್ಲಿ ಲಾಭ. ವಿಳಂಬವಾಗಿದ್ದ ಸಂದೇಶಗಳು ಬರುವುದು. ಆರೋಗ್ಯ ಸುಧಾರಣೆ. ವಿರೋಧಿಗಳಿಗೆ ಹಿನ್ನಡೆ. ಶುಭದಿನ: 17; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಶಾಂತಿ. ಕುಟುಂಬ ಸದಸ್ಯರಲ್ಲಿ ಒಮ್ಮತ. ಹಿತಕರ ಸಂದೇಶ. ಪ್ರೀತಿ ಪಾತ್ರರೊಂದಿಗೆ ಪ್ರಯಾಣ. ಉದ್ಯೋಗದಲ್ಲಿ ಮುನ್ನಡೆ. ವಾರದ ಮಧ್ಯಭಾಗದಲ್ಲಿ ಆಲಸ್ಯ. ತಪ್ಪುಗಳಾಗುವುದು. ಒತ್ತಡ ಹೆಚ್ಚಾಗುವುದು. ಪೆಟ್ಟಾಗುವ ಸಾಧ್ಯತೆ. ಕಾರ್ಯ ವೈಫಲ್ಯ, ನಷ್ಟ. ಆಕಸ್ಮಿಕ ದುರಸ್ತಿ ಕಾರ್ಯಕ್ಕೆ ಖರ್ಚು. ವಾರಾಂತ್ಯ ಸ್ಥಿತಿ ಸುಧಾರಣೆ. ಶುಭದಿನ: 12; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ




ವಾರದ ಮಧ್ಯಭಾಗದವರೆಗೂ ಸೌಖ್ಯ. ನೂತನ ವಾಹನ ಖರೀದಿಸುವ ಚಿಂತನೆ. ಹಿತಕರ ಸುದ್ದಿ. ಕೆಲಸಗಳು ಸರಾಗವಾಗಿ ನಡೆಯುವುದು. ವ್ಯಾಪಾರದಲ್ಲಿ ಲಾಭ. ಗಣ್ಯರಿಂದ ಸಹಕಾರ. ವಾರಾಂತ್ಯದಲ್ಲಿ ಚಂಚಲ ಮನಸ್ಸು. ಸೋಮಾರಿತನದಿಂದ ಲೆಕ್ಕ ಪತ್ರಗಳಲ್ಲಿ ತಪ್ಪಾಗುವುದು. ಉದ್ಯೋಗದಲ್ಲಿ ಅಶಾಂತಿ, ನಷ್ಟ. ಶುಭದಿನ: 14; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಏನಾದರೊಂದು ಚಿಂತೆ. ಮಕ್ಕಳ ಅಸಹಕಾರ. ಆರೋಗ್ಯದಲ್ಲಿ ವ್ಯತ್ಯಯ. ಉದ್ಯೋಗದಲ್ಲಿ ಅಶಾಂತಿ. ನಿಯಮಗಳನ್ನು ಮೀರಿ ದಂಡ ಕಟ್ಟುವ ಸಾಧ್ಯತೆ. ಶತ್ರು ಭೀತಿ. ವಾರದ ಮಧ್ಯಭಾಗದಿಂದ ಮನಶಾಂತಿ. ಮಿತ್ರರಿಂದ ಸಹಾಯ. ಕೆಲಸ ಕಾರ್ಯಗಳಲ್ಲಿ ಸಫಲತೆ. ವ್ಯಾಪಾರದಲ್ಲಿ ಲಾಭ. ಹಿತಕರ ಸಂದೇಶಗಳು. ಶುಭದಿನ: 17; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಬೇಸರ. ನಿರೀಕ್ಷಿಸಿದಂತೆ ಕೆಲಸಗಳು ನಡೆಯುವುದಿಲ್ಲ. ವ್ಯಾಪಾರದಲ್ಲಿ ಹಿನ್ನಡೆ. ಅನಾವಶ್ಯಕ ತಿರುಗಾಟ. ಅಧಿಕ ಖರ್ಚು. ಅಪೂರ್ಣ ಸಂದೇಶಗಳು. ವಾರದ ಮಧ್ಯಭಾಗದಿಂದ ಚೇತರಿಕೆ, ಶ್ರಮ ಕಡಿಮೆಯಾಗುವುದು. ಆಪ್ತರಿಂದ ಸಹಕಾರ. ಉದ್ಯೋಗದಲ್ಲಿ ಸಮಾಧಾನ. ಕ್ರಯ ವಿಕ್ರಯಗಳಲ್ಲಿ ಲಾಭ ವೃದ್ಧಿ. ಶುಭದಿನ: 17; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಮನಶಾಂತಿ. ಕುಟುಂಬದಲ್ಲಿ ಒಮ್ಮತ. ತಕರಾರುಗಳು ಬಗೆಹರಿಯುವುದು. ಕಾರ್ಯ ಸಿದ್ಧಿ. ವ್ಯಾಪಾರ, ವಹಿವಾಟುಗಳಲ್ಲಿ ಲಾಭ. ಹಿತಕರ ಸುದ್ದಿ. ವಾರದ ಮಧ್ಯಭಾಗದಲ್ಲಿ ಭಯ. ವಿರೋಧಿಗಳಿಂದ ತೊಂದರೆ. ಆರೋಗ್ಯ ವ್ಯತ್ಯಯ. ಅಹಿತಕರ ಘಟನೆಗಳು. ಕೋಪದ ಮಾತುಗಳು. ವಾರಾಂತ್ಯದಲ್ಲಿ ಅನುಕೂಲ. ಶುಭದಿನ: 13; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ




ವಾರದ ಮಧ್ಯಭಾಗದವರೆಗೂ ಅನುಕೂಲ. ಅಪೇಕ್ಷೆಯಂತೆ ಕಾರ್ಯಗಳು ಈಡೇರುವುವು. ವಿಶೇಷ ವಿಚಾರಗಳ ಸಮಾಲೋಚನೆ. ಬಂಧುಗಳ ಸಹಾಯ. ಪ್ರಯಾಣ ಸೌಖ್ಯ. ಅಧ್ಯಯನದಲ್ಲಿ ಮುನ್ನಡೆ. ವಾರಾಂತ್ಯದಲ್ಲಿ ಅಶಾಂತಿ, ಪೆಟ್ಟಾಗುವಿಕೆ. ಕುಟುಂಬದಲ್ಲಿ ಕಲಹ. ಉದ್ಯೋಗದಲ್ಲಿ ಹಿನ್ನಡೆ. ದುಃಖ ವಾರ್ತೆ. ಶುಭದಿನ: 15; ಗಣಪತಿ, ಪಾರ್ವತಿ ಅಷ್ಟೋತ್ತರ ಪಠಿಸಿ